ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 8 ಸಂ. 10 ಅಕ್ಟೋಬರ್ 2011 ರೂ.15

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ

(ಅನು: ಶ್ಯಾಮಲಾದೇವಿ)

ನಾನು ಇದನ್ನು ಬಹಳ ಸಮಯದಿಂದ ಗಮನಿಸುತ್ತಿದ್ದೇನೆ. ನಾವು ನಮ್ಮೊಳಗೆ ಯಾವ ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಹೊಂದಿರುತ್ತೇವೆಯೋ, ಅವು ಹೊರಗೆ ಜೀವನದಲ್ಲಿ ಪ್ರಕಟಗೊಳ್ಳುತ್ತವೆ. ನಾವು ನಮ್ಮೊಳಗೆ ಆನಂದವನ್ನು ಅನುಭವಿಸಿದರೆ, ಹೊರಗೂ ಆನಂದ ಇರುತ್ತದೆ. ನಮ್ಮೊಳಗೆ ಶಾಂತಿ ಇದ್ದರೆ, ಹೊರಗೂ ಶಾಂತಿ ಇರುತ್ತದೆ. ನಮ್ಮೊಳಗೆ ಕೋಪವಿದ್ದರೆ, ಹೊರಗೆ ಗೊಂದಲವಿರುತ್ತದೆ. ನಮ್ಮೊಳಗೆ ಬಹಳಷ್ಟು ನಕಾರಾತ್ಮಕತೆ ಇದ್ದರೆ, ಅದು ಅಪಘಾತಗಳಾಗಿಯೂ ಕೂಡ ಹೊರಗೆ ಪ್ರಕಟಗೊಳ್ಳುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ನಮ್ಮ ವಿಧಿಗಳನ್ನು ನಾವೇ ಸೃಷ್ಟಿಸುತ್ತೇವೆ.

ನಮ್ಮ ಹಿಂದಿನ ಜನ್ಮಗಳ ಕರ್ಮಗಳಿಂದ ಸೃಷ್ಟಿ ಮಾಡಿರುವ ವಿಧಿಗಳಿವೆ. ಆದರೆ ನಾವು ಧ್ಯಾನಗಳಿಂದ ಮತ್ತು ಈ ಶಕ್ತಿಗಳ ಸಾಧನಾ ಮಾರ್ಗಗಳಿಂದ ಕರ್ಮಗಳನ್ನು ಕರಗಿಸುವುದರಿಂದ ಈ ವಿಧಿಗಳನ್ನು ಬದಲಾಯಿಸಬಹುದು. ದಿನನಿತ್ಯದ ಬದುಕಿನಲ್ಲಿ ನಾವು ಹೊಸ ಮಾರ್ಗಗಳನ್ನು, ಹೊಸ ವಿಧಿಗಳನ್ನು ಸೃಷ್ಟಿಸುತ್ತೇವೆ.

ನಾವು ಒಬ್ಬಂಟಿಗರಲ್ಲ. ನಾವು ಈ ಭೂಮಿಯ ಮೇಲೆ ಒಬ್ಬರಿಗೊಬ್ಬರು ಸಂಬಂಧ ಹೊಂದಿದ್ದೇವೆ. ಕೇವಲ ಮಾನವ ಜೀವಿಗಳೊಂದಿಗೆ ಮಾತ್ರವೇ ಅಲ್ಲ, ಇತರ ಎಲ್ಲ ಜೀವಿಗಳೊಂದಿಗೆ ಸಹ ಸಂಬಂಧಿಸಿದ್ದೇವೆ. ಪ್ರಕೃತಿಯೊಂದಿಗೆ, ಸುತ್ತಲಿನ ವಾತಾವರಣದೊಂದಿಗೆ, ಮತ್ತು ಈ ಭೂಮಿಯ ಮೇಲೆ ಕಾರ್ಯೋನ್ಮುಖವಾಗಿರುವ ಎಲ್ಲ ಶಕ್ತಿಗಳೊಂದಿಗೆ ಸಂಪರ್ಕ ಹೊಂದಿದ್ದೇವೆ. ನಾವು ನಮಗಾಗಿ ವಿಧಿಗಳನ್ನು ಸೃಷ್ಟಿಸುತ್ತಿರುವಾಗ, ಇಡೀ ಭೂಮಿಯ ಒಟ್ಟಾರೆ ವಿಧಿಗಳ ಮೇಲೆ ಕೂಡ ನಾವು ಪ್ರಭಾವ ಬೀರುತ್ತಿರುತ್ತೇವೆ. ಹಿಮಾಲಯದಲ್ಲಿ ಮತ್ತು ಇತರ ಸ್ಥಳಗಳಲ್ಲಿ ಧ್ಯಾನ ಮಾಡುತ್ತಿರುವ ಋಷಿಗಳಿಗೆ ಇದು ಬಹಳ ಚೆನ್ನಾಗಿ ಗೊತ್ತು. ಅದಕ್ಕಾಗಿಯೇ ಅವರು ತಮ್ಮ ಇಡೀ ಜೀವನಗಳನ್ನು ಧ್ಯಾನ ಮಾಡುವುದರಲ್ಲಿ ಹಾಗೂ ಭೂಮಿಯ ಮೇಲೆ ಶಾಂತಿ ಮತ್ತು ಸಾಮರಸ್ಯಗಳನ್ನು ಸೃಷ್ಟಿಸುವುದರಲ್ಲಿ ಕಳೆಯುತ್ತಿದ್ದಾರೆ. ವಿವಿಧ ವ್ಯವಸ್ಥೆಗಳನ್ನು ನಿರ್ವಹಿಸುತ್ತಿರುವ, ಅಧಿಕಾರದಲ್ಲಿರುವ ಜನರು ದುರಾಸೆ ಮತ್ತು ಹಿಂಸಾಚಾರಗಳನ್ನು ಅನುಸರಿಸುತ್ತಿದ್ದಾರೆ. ಅವರು ಕಷ್ಟ ಮತ್ತು ನೋವುಗಳನ್ನು ಸೃಷ್ಟಿಸುತ್ತಿದ್ದಾರೆ. ಇವುಗಳಿಗೆ ಅವರ ಕೊಡುಗೆಯ ಅಗಾಧತೆ ಎಷ್ಟು ಭಾರಿ ಪ್ರಮಾಣದಲ್ಲಿದೆಯೆಂದರೆ, ಅವುಗಳ ವಿರುದ್ಧವಾಗಿ ಕೈಗೊಂಡಿರುವ ಎಲ್ಲ ಧ್ಯಾನಗಳು ಮತ್ತು ಚೈತನ್ಯಗಳು ಅಪರಿಣಾಮಕಾರಿಯಾಗಿ ಕಾಣುತ್ತಿವೆ.

ನಾವು ಕತ್ತಲ ಯುಗದಿಂದ ಬೆಳಕಿನ ಯುಗಕ್ಕೆ ಹಾಯ್ದು ಹೋಗುತ್ತಿದ್ದೇವೆ ಎಂಬುದು ನಮಗೆ ಗೊತ್ತಿದೆ. ಹೆಚ್ಚುಹೆಚ್ಚು ಜನರು ಇದಕ್ಕೆ ಎಚ್ಚರಗೊಳ್ಳುತ್ತಿದ್ದಾರೆ. ಹೆಚ್ಚುಹೆಚ್ಚು ಜನರು ಧ್ಯಾನ ಮಾಡುತ್ತಿದ್ದಾರೆ ಮತ್ತು ಬದಲಾವಣೆಯ ಪ್ರಕ್ರಿಯೆಗಳನ್ನು ಬಲಪಡಿಸುತ್ತಿದ್ದಾರೆ. ಹೊಸ ವಿಧಿಗಳು ರೂಪುಗೊಳ್ಳುತ್ತಿರುವ ಈ ಕಾಲದಲ್ಲಿ, ಸಕಾರಾತ್ಮಕ ಭಾವುಕತೆ ಮತ್ತು ಆಲೋಚನೆಗಳಿಂದ ಹೊಸ ಯುಗಕ್ಕಾಗಿ ಪರಿಸ್ಥಿತಿಗಳನ್ನು ಸೃಷ್ಟಿಸುವುದು ಈ ಭೂಮಿಯ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಶಾಂತಿ ಮತ್ತು ಸಮೃದ್ಧಿಗಳೆಡೆಗೆ ನಮ್ಮನ್ನು ಒಯ್ಯುವ ಸೂಕ್ಷ್ಮ ಪ್ರಕ್ರಿಯೆಗಳ ಬಗ್ಗೆ ನಾವು ಅರಿವನ್ನು ಬೆಳೆಸಿಕೊಳ್ಳಬೇಕು ಮತ್ತು ಪ್ರಜ್ಞಾಪೂರ್ವಕವಾಗಿ ಹೊಸ ಯುಗಕ್ಕಾಗಿ ಕೆಲಸ ಮಾಡಲು ಪ್ರಾರಂಭಿಸಬೇಕು. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



"ಆಗಸ್ಟ್ 28ರಂದು ಅಮರ ಮಹಾಸಮಾಧಿ ಕಾರ್ಯಕ್ರಮದಲ್ಲಿ ಗುರೂಜಿಯವರು ಧ್ಯಾನಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವುದು"

### ಸುದ್ದಿ-ಸೂಚನೆ

- 28-8-2011ರಂದು ತಪೋನಗರದಲ್ಲಿ ನಡೆದ ಅಮರ ಮಹಾಸಮಾಧಿ ಕಾರ್ಯಕ್ರಮದಲ್ಲಿ ಸುಮಾರು 400ಕ್ಕೂ ಹೆಚ್ಚುಜನ ಸೇರಿದ್ದರು.
- 28-8-2011ರಂದು ತಪೋನಗರದಲ್ಲಿ ಅಮರ ಮಹಾಸಮಾಧಿ ಕಾರ್ಯಕ್ರಮದಂದು "Guruji Speaks Vol 4", "iGuruji - Vol 5" ಪುಸ್ತಕಗಳು ಮತ್ತು "New Age Realities" ಪುಸ್ತಕದ ಕನ್ನಡ ಅನುವಾದವನ್ನು ಬಿಡುಗಡೆ ಮಾಡಲಾಯಿತು.
- ನಮ್ಮ ಪ್ರಕಟಣೆಗಳಿಗಾಗಿ ಆನ್‌ಲೈನ್ ಅಥವಾ ಡಿಡಿಯ ಮೂಲಕ 'Manasa Light Age Foundation' ಹೆಸರಿನಲ್ಲಿ ಆರ್ಡರ್ ಮಾಡಬಹುದು.
- ನಮ್ಮ ಎಲ್ಲಾ ಸಾಧಕರು ವಾರ್ತಾಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು. ವಾರ್ತಾಪತ್ರದ ನವೀಕರಣ ಪತ್ರ ತಲುಪಿದ ಕೂಡಲೇ ನವೀಕರಿಸಿಕೊಳ್ಳಬೇಕಾಗಿ ವಿನಂತಿ.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ವಿಶೇಷ ಧ್ಯಾನ &<br>ಲೈಟ್ ಚಾನಲಿಂಗ್: ಮ.12-1 |
| 30-10-11 | ಅಖಂಡ ಧ್ಯಾನ: ಬೆಳಿಗ್ಗೆ 11-1 |

ಗುರೂಜಿಯವರ ಉಪನ್ಯಾಸಗಳ ಡಿ.ವಿ.ಡಿ.ಗಳು ಈಗ ಸದಸ್ಯರಿಗೆ ಲಭ್ಯ ಇವೆ. ವಿವರಗಳಿಗಾಗಿ ಮಾನಸ ಆಫೀಸನ್ನು ಸಂಪರ್ಕಿಸಿ.

ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 03 | ಸೋಮ | ಸರಸ್ವತಿ ಪೂಜೆ |
| 04 | ಮಂಗಳ | ದುರ್ಗಾಷ್ಟಮಿ |
| 05 | ಬುಧ | ಮಹಾನವಮಿ<br>ಆಯುಧಪೂಜೆ |
| 06 | ಗುರು | ವಿಜಯದಶಮಿ |
| 11 | ಮಂಗಳ | ಪೂರ್ಣಿಮಾ |
| 20 | ಗುರು | ಕೃಷ್ಣಾಷ್ಟಮಿ |
| 25 | ಮಂಗಳ | ನರಕ ಚತುರ್ದಶಿ<br>ಮಾಸ ಶಿವರಾತ್ರಿ |
| 26 | ಬುಧ | ಅಮಾವಾಸ್ಯೆ<br>ಮಹಾಲಕ್ಷ್ಮಿ ಪೂಜೆ |
| 27 | ಗುರು | ದೀಪಾವಳಿ |

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

8-10-2011 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಅವರ ಬ್ಲಾಗ್-ಅನ್ನು ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

## ಲೈಟ್ ಚಾನಲಿಂಗ್ ಕಾರ್ಯದ ಇತ್ತೀಚಿನ ಸುದ್ದಿ

- ಬೆಳಕು ಭವಿಷ್ಯವನ್ನು ಬದಲಾಯಿಸುತ್ತದೆ. ಶಾಲಾ ಮಕ್ಕಳು ತಮ್ಮ ಚಿಕ್ಕ ಅಥವಾ ದೊಡ್ಡ ಸಮಸ್ಯೆಗಳ ಪರಿಹಾರಕ್ಕಾಗಿ ಬೆಳಕನ್ನು ಬಳಸುತ್ತಿರುವುದನ್ನು ನಾವು ನೋಡಿದ್ದೇವೆ. ಅವರು ತಮ್ಮ ಶಾಲಾಭ್ಯಾಸದಲ್ಲಿ ಮುನ್ನಡೆ ಸಾಧಿಸಲು, ತಮ್ಮ ನಡುವಿನ ಸಂಬಂಧಗಳನ್ನು ಉತ್ತಮಗೊಳಿಸಲು ಹಾಗೂ ತಮ್ಮ ಸಹಪಾಠಿಗಳನ್ನು ಹೀಲ್ ಮಾಡಲು ಬೆಳಕಿನ ಸಹಾಯವನ್ನು ಪಡೆಯುತ್ತಾರೆ. ಮೌನವಾಗಿ ಲೈಟ್ ಚಾನಲ್ ಮಾಡುತ್ತಿರುವುದರಿಂದ ಅವರೂ ಕೂಡಾ ಪ್ರಪಂಚದ ಭವಿಷ್ಯವನ್ನು ರೂಪಿಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿರುವುದು ಬಹುಶಃ ಅವರಿಗೆ ತಿಳಿದಿಲ್ಲ.
- 17 ಲಕ್ಷಕ್ಕೂ ಹೆಚ್ಚು ಮಕ್ಕಳು ಸುಮಾರು 2000 ಶಾಲೆಗಳಲ್ಲಿ ಒಂದು ಬಾರಿಯಾದರೂ ಲೈಟ್ ಚಾನಲ್ ಮಾಡಿದ್ದಾರೆ. 2 ಲಕ್ಷಕ್ಕೂ ಹೆಚ್ಚು ಮಕ್ಕಳು ಸುಮಾರು 400 ಶಾಲೆಗಳಲ್ಲಿ ಪ್ರತಿದಿನದ ಶಾಲಾಪ್ರಾರ್ಥನೆಯ ಸಮಯದಲ್ಲಿ ಲೈಟ್ ಚಾನಲ್ ಮಾಡುತ್ತಿದ್ದಾರೆ.
- ಮೈಸೂರಿನಲ್ಲಿ ಇನ್ನೊಂದು ಲೈಟ್ ಚಾನಲಿಂಗ್ ಕೇಂದ್ರವನ್ನು ಕಳೆದ ತಿಂಗಳು ತೆರೆಯಲಾಗಿದೆ. ■

## ಲೈಟ್ ಚಾನಲಿಂಗ್ ಅನುಭವಗಳು

ಈ ಹಿಂದೆ ನನಗೆ ಶಾಂತಿಯಿಂದ ಕುಳಿತು ಅಭ್ಯಾಸ ಮಾಡಲಾಗುತ್ತಿರಲಿಲ್ಲ. ಆದ್ದರಿಂದ ನಾನು 2–3 ವಿಷಯಗಳಲ್ಲಿ ಫೇಲಾಗುತ್ತಿದ್ದೆ. ಲೈಟ್ ಚಾನಲ್ ಮಾಡಲು ಆರಂಭಿಸಿದ ನಂತರ ಈಗ ನಾನು ಎಲ್ಲಾ ಪಠ್ಯವಿಷಯಗಳಲ್ಲಿ ಉತ್ತೀರ್ಣನಾಗಿದ್ದೇನೆ ಮತ್ತು ಈಗ ಸಂತೋಷದಿಂದಿದ್ದೇನೆ.

– ಪ್ರಸನ್ನ ಕೆ., 9ನೇ ತರಗತಿ, ಶ್ರೇಯಸ್ ಪ್ರೌಢ ಶಾಲೆ, ಬೆಂಗಳೂರು

ನಾನು ನನ್ನ ಶಾಲಾ ಅಭ್ಯಾಸವನ್ನು ಆರಂಭಿಸುವ ಮೊದಲು 5 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡುತ್ತೇನೆ. ಇದು ನನಗೆ ಎಲ್ಲಾ ಸಮಯದಲ್ಲೂ ಹೆಚ್ಚಿನ ಸಹನೆ, ಶಾಂತಿ ಮತ್ತು ಸಂತೋಷವನ್ನು ನೀಡಿದೆ.

– ಪೂರ್ಣಶ್ರೀ ಮಂಜುನಾಥ್, ವಿದ್ಯಾರ್ಥಿ, 6ನೇ ತರಗತಿ

ಡಿಸೆಂಬರ್ 2010 ರಲ್ಲಿ ನಮ್ಮ ಶಾಲೆಯಲ್ಲಿ ನೀವು ನಡೆಸಿಕೊಟ್ಟ ಲೈಟ್ ಚಾನಲ್ ಕಾರ್ಯಕ್ರಮವು ನಮ್ಮ ವಿದ್ಯಾರ್ಥಿಗಳ ಏಕಾಗ್ರತೆ, ಮನಸ್ಸಿನ ಸ್ಥಿರತೆಯನ್ನು ಹೆಚ್ಚಿಸಿರುವುದರಲ್ಲಿ ಮತ್ತು ಅವರ ಸಮಗ್ರ ಬೆಳವಣಿಗೆಯಲ್ಲಿ ಅಪಾರವಾಗಿ ಸಹಕರಿಸಿದೆ ಎಂದು ನಾನು ಅರಿತಿದ್ದೇನೆ. ಇದು ಕಳೆದ ಬಾರಿಯ ಹತ್ತನೇ ತರಗತಿಯ ಫಲಿತಾಂಶದ (89%) ಮೇಲೂ ಪರಿಣಾಮ ಬೀರಿದೆ.

– ಲಾಜೂ ಪಿ. ನಾಯಕ್, ಮುಖ್ಯೋಪಾಧ್ಯಾಯಿನಿ, ಶ್ರೇಯಸ್ ಪ್ರೌಢಶಾಲೆ, ಬೆಂಗಳೂರು

## ತಪೋನಗರ ಡೈರಿ

ಸೀಮಾ ಅಲ್‌ವೇಲ್ ಸೋಮಯಾಜಿ; ಅನು: ಪಾಂಡುರಂಗ

10 ದಿನಗಳ ಕಾಲ ಭೂಮಿಯ ಮೇಲಿದ್ದ ದೇವಿ ಮಹಾಲಕ್ಷ್ಮಿಯನ್ನು ತಪೋನಗರ ನಿವಾಸಿಗಳು ತಮ್ಮ ಮನೆಗಳಲ್ಲಿ ಮತ್ತು ಹೃದಯಗಳಲ್ಲಿ ಸ್ವಾಗತಿಸಿದ್ದರು. ಆಕೆ ಪ್ರತಿ ಮನೆಗಳಲ್ಲೂ ಬೆಳಕಿನ ರೂಪದಲ್ಲಿ ಆಗ ಇರುತ್ತಾಳೆಂದು ತಿಳಿದಿದ್ದುದರಿಂದ ಆ ದಿನಗಳು ಬಹಳ ವಿಶೇಷವಾಗಿದ್ದವು. ಇದಾದ ನಂತರ, ಶ್ರೀ ಕೃಷ್ಣ ಜನ್ಮಾಷ್ಟಮಿಯ ವಿಶೇಷ ಧ್ಯಾನ ಮತ್ತು ಶ್ರೀ ಕೃಷ್ಣನ ದಿವ್ಯ ಉಪಸ್ಥಿತಿ 10 ದಿನಗಳ ಕಾಲ ನಮ್ಮೆಲ್ಲರ ಮನೆಗಳಲ್ಲಿ ಇತ್ತು. ಈ ದೇವರುಗಳು ತಪೋನಗರ ನಿವಾಸಿಗಳಂತೆ ಇಲ್ಲಿ ಸಂತೋಷದಿಂದ ಇದ್ದರು ಎಂಬುವುದು ನಮಗೆ ಮನವರಿಕೆಯಾಗಿದೆ!

ಆಗಸ್ಟ್ 25ರಂದು ಅಮರ ಮಹಾಸಮಾಧಿಯ ದಿನವಾದರೂ, ಸಾಧಕರ ಕೆಲಸಗಳಿಗೆ ಅಡಚಣೆಯಾಗದಿರಲು ಆ ದಿನದ ಕಾರ್ಯಕ್ರಮವನ್ನು ಮುಂದಿನ ಭಾನುವಾರದಂದು ಹಮ್ಮಿಕೊಳ್ಳಲಾಗಿತ್ತು. ತಮ್ಮ ಕೆಲಸಗಳಿಂದ ಒಂದು ದಿನದ ರಜೆ ತೆಗೆದುಕೊಳ್ಳಲು ನಾವು ಸಹಿಸಬೇಕಾಗಿರುವ ಕಷ್ಟ ಮಾಸ್ಟರ್‌ಗಳಿಗೆ ಗೊತ್ತಿದೆ ಎಂದು ಮತ್ತು ನಮ್ಮ ಬಗ್ಗೆ ಅವರಿಗಿರುವ ಕಾಳಜಿ ಎಷ್ಟೆಂದು ನಾವು ಪದೇಪದೇ ಹೇಳಬೇಕಾಗಿಲ್ಲ. ಅವರುಗಳು ತಾರೀಖಿಗಿಂತ ಭಾವನೆಗೆ ಹೆಚ್ಚು ಬೆಲೆ ಕೊಡುತ್ತಾರೆ.

ಅಮರ ಮಹಾಸಮಾಧಿ ಆಚರಣೆಯ ದಿನದಂದು ಮೂರು ಪುಸ್ತಕಗಳು ಬಿಡುಗಡೆಗೊಂಡವು. ಅಂದು ವೈಯಕ್ತಿಕ ಆಶೀರ್ವಾದ ಪಡೆದ ನಂತರ, ಪುಣೆಯಿಂದ ಬಂದಿದ್ದ 20 ಜನ ದೂರಕಲಿಕೆಯ ಸಾಧಕರ ಗುಂಪೊಂದು ಒಂದು ಗಂಟೆಯ ತನಕ ಗುರೂಜಿಯವರೊಂದಿಗೆ ಅನೌಪಚಾರಿಕ ಮಾತುಕತೆಯಲ್ಲಿ ತೊಡಗಿತ್ತು. ಅವರೆಲ್ಲರೂ ಗುರೂಜಿಯವರಿಂದ ಮಾರ್ಗದರ್ಶನ ಪಡೆಯುವುದರ ಜೊತೆಗೆ, ತಮ್ಮ ಪ್ರೀತಿಯನ್ನು ಮತ್ತು ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು. ಪ್ರತೀಬಾರಿ ಅವರು ಗುಂಪಿನಲ್ಲಿ ಬಂದಾಗ, ಗುರೂಜಿಯವರು ಅವರನ್ನು ಭೇಟಿಮಾಡುವುದಾಗಿ ಭರವಸೆ ನೀಡುವುದರ ಮೂಲಕ ಆಶೀರ್ವದಿಸಿದರು. ಆಗ ಅವರೆಲ್ಲರ ಮುಖಗಳು ವಿವರಿಸಲಾಗದ ಸಂತೋಷದಿಂದ ಹೊಳೆಯುತ್ತಿದ್ದವು.

ನಮಗೆ ಶನಿವಾರಗಳಂದು ಸಂಜೆ ಆಂಜನೇಯ ದೇವಸ್ಥಾನದಲ್ಲಿ ಗುರೂಜಿಯವರ ಜೊತೆಗೆ ಧ್ಯಾನ ಮಾಡುವ ಒಂದು ವಿಶೇಷ ಅವಕಾಶವಿದೆ. ■

## ಲೈಟ್ ಚಾನಲ್ಸ್

ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

07–08–2011

ನಿಮಗೆ ಅನುಮಾನಗಳಿದ್ದಲ್ಲಿ ಅಥವಾ ನೀವು ವಿಚಲಿತರಾದರೆ 3–5 ನಿಮಿಷಗಳವರೆಗೆ ಬೆಳಕಿನ ಸಾಗರವನ್ನು ಅನುಭವಿಸಿ. ಬುದ್ಧಿಯ ಹಂತದಿಂದ ಅನುಭವಿಸುವ ವಲಯವನ್ನು ನಾವು ಪ್ರವೇಶಿಸಬೇಕು.

ದೇವರು, ಬೆಳಕು, ಅದ್ಭುತ ಬುದ್ಧಿಶಕ್ತಿ ಎಲ್ಲೆಲ್ಲಿಯೂ ಇದೆ. ನೀವು ದೇವರೊಂದಿಗೆ ಸಂಪರ್ಕಿಸಲು ಪ್ರಯತ್ನಿಸಿಲ್ಲ. ತೆರೆದ ಅಥವಾ ಮುಚ್ಚಿದ ಕಣ್ಣುಗಳೊಂದಿಗೆ ನಿಮ್ಮ ಅರಿವನ್ನು ಬದಲಾಯಿಸಲು ಪ್ರಯತ್ನಿಸಿ ಮತ್ತು ಅವನ ಇರುವಿಕೆಯ ಬಗ್ಗೆ ತಿಳಿಯಿರಿ. ಕೂಡಲೇ ನಿಮಗೆ ಸಂಪರ್ಕ ಸಿಗುತ್ತದೆ.

ರಕ್ಷಾಕವಚ ನಮ್ಮನ್ನು ರಕ್ಷಿಸುವುದು ಮಾತ್ರವಲ್ಲ, ಅದಕ್ಕೆ ತನ್ನದೇ ಆದ ಬುದ್ಧಿಶಕ್ತಿ ಇರುವುದರಿಂದ ಅದು ಮೇಲ್ವಿಚಾರಣೆ ಮಾಡುತ್ತದೆ ಮತ್ತು ಮಾರ್ಗದರ್ಶಿಸುತ್ತದೆ. ನಾವು ನಮ್ಮ ರಕ್ಷಾಕವಚದ ಬಗ್ಗೆ ಅರಿತಿರಬೇಕು ಮತ್ತು ಅದರೊಂದಿಗೆ ನಿರಂತರ ಸಂಭಾಷಣೆಯಲ್ಲಿ ತೊಡಗಿರಬೇಕು.

ಪ್ರಳಯದ ಕಾಲಗಳು ಆಧ್ಯಾತ್ಮಿಕವಾಗಿ ಬೆಳೆಯಲು ಅತ್ಯುತ್ತಮ ಕಾಲಗಳು, ಏಕೆಂದರೆ ನಮಗೆ ವಿಶೇಷ ಅವಕಾಶಗಳು, ವಿಶೇಷ ಚೈತನ್ಯಗಳು ಮತ್ತು ವಿಶೇಷ ಸಹಾಯಗಳಿವೆ. ಇವುಗಳ ಬಗ್ಗೆ ಚಿಂತನೆ ಮಾಡಿ.

ಜನರು ಧ್ಯಾನ ತೆಗೆದುಕೊಳ್ಳುತ್ತಾರೆ, ಕೆಲವರು ಪ್ರಪಂಚಕ್ಕೆ ತಾವು ಧ್ಯಾನಿಗಳೆಂಬುದನ್ನು ಪ್ರದರ್ಶಿಸುತ್ತಾರೆ. ಅಮರರು ನಮಗೆ ಹೇಳಿದರು– ಕಾಡಿನಲ್ಲಿ ಹೂವು ತನ್ನಷ್ಟಕ್ಕೆ ಅರಳುತ್ತದೆ. ಇದು ಯಾರಿಗೂ ತಿಳಿಯುವುದಿಲ್ಲ. ಈ ಬದುಕನ್ನು ಸಹಜವಾಗಿ, ನಿಯತವಾಗಿ, ವಿವೇಚನೆಯಿಂದ, ಎಚ್ಚರಿಕೆಯಿಂದ ಬಾಳೋಣ. ಅದರಲ್ಲಿ ಘನತೆ ಇದೆ.

ಇದು ಒಳ್ಳೆಯ ಮತ್ತು ಕೆಟ್ಟ ವಿಷಯಗಳು ಎದ್ದು ಕಾಣುವ ಕಾಲ. ಕೆಟ್ಟ ವಿಷಯವೇನಾದರೂ ತಲೆದೋರಿದರೆ ಅದರೊಂದಿಗೆ ಸರಿಯಾಗಿ ವ್ಯವಹರಿಸಿ, ಎದುರಿಸಿ, ಕಿತ್ತು ಹಾಕಿ. ನಿಮಗೆ ಇಡೀ ವಿಶ್ವದಿಂದ ಸಹಾಯ ಸಿಗುತ್ತದೆ. ಇದೊಂದು ಆಧ್ಯಾತ್ಮಿಕ ಮಾರ್ಗ.

ಧ್ಯಾನ ಉಸಿರಾಟದಂತೆ ನಮ್ಮ ಬದುಕಿನ ಭಾಗವಾಗಬೇಕು. ಇದನ್ನು ಸಡಿಲಗೊಳಿಸಬೇಡಿ, ಎಂದೂ ಬಿಟ್ಟುಕೊಡಬೇಡಿ.

ನೀವು ಕೆಟ್ಟ ವಿಷಯವನ್ನು ಕೇಳಿದ್ದೇ ಆದರೆ ಆತಂಕಕ್ಕೆ ಒಳಗಾಗಬೇಡಿ. ಅದನ್ನು ಎದುರಿಸಿ, ಕಿತ್ತೊಗೆಯಿರಿ. ಇವೆಲ್ಲ ಮನಸ್ಸಿನೊಳಗಿರುವಂತಹುದು. ನೀವು ಯಾವುದನ್ನೂ ಅಥವಾ ಯಾರನ್ನೂ ತ್ಯಜಿಸಬೇಕಾಗಿಲ್ಲ, ನೀವು ಅತ್ಯಂತ ಹೆಚ್ಚಿನ ಶಕ್ತಿಯುಳ್ಳವರು. ಋಷಿಗಳು ರಕ್ಷಿಸುತ್ತಿದ್ದಾರೆ ಮತ್ತು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ನೀವು ಶಕ್ತಿಹೀನರೆಂದು ಭಾವಿಸಿದರೆ, ಕಪ್ಪು ಚೈತನ್ಯಗಳು ಪ್ರವೇಶಿಸಲು ಅನುವು ಮಾಡಿಕೊಟ್ಟಂತೆ ಆಗುತ್ತದೆ.

ನಾವು ಭೌತಿಕಮಟ್ಟದಲ್ಲಿ ಮತ್ತು ಹೆಚ್ಚಾಗಿ ಸೂಕ್ಷ್ಮಮಟ್ಟದಲ್ಲಿ ಒಂದು ಬೆಳಕಿನ ಕಾರ್ಯಕರ್ತರ ನೆಟ್‌ವರ್ಕ್ ಅನ್ನು ಸ್ಥಾಪಿಸಲು ತೀವ್ರವಾಗಿ ಪ್ರಯತ್ನಿಸಿದ್ದೆವು. ಇದು ವ್ಯಕ್ತಿಗಳನ್ನು ಮಾತ್ರವಲ್ಲ ವಿಶ್ವದ ಎಲ್ಲ ರಾಷ್ಟ್ರಗಳನ್ನು ಮಾರ್ಗದರ್ಶಿಸುವ ಒಂದು ರೀತಿಯ ಆಧ್ಯಾತ್ಮಿಕ ಮಂಡಲಿ. ಆದರೆ ಇದು ನಮ್ಮಿಂದ ಸಾಧ್ಯವಾಗಲಿಲ್ಲ, ಏಕೆಂದರೆ ಸಮಾನ ಉದ್ದೇಶಗಳ ಸಹ ಹೊಂದಾಣಿಕೆ ಇಲ್ಲದಿರುವುದು. ಬೆಳಕಿನ ಕಾರ್ಯಕರ್ತರು ಅದ್ಭುತ ಜನ, ಆದರೆ ನಾವುಗಳು ಒಂದಾಗಿ, ಒಟ್ಟಿಗೆ ಕೆಲಸ ಮಾಡಲಾಗುವುದಿಲ್ಲ. ಇದು ಅತ್ಯಂತ ಶೋಚನೀಯ. ನಾವಿನ್ನೂ ವಿಕಸನಗೊಂಡಿಲ್ಲ ಎಂಬುವುದನ್ನು ಇದು ಸೂಚಿಸುತ್ತದೆ.

2012ನ್ನು ಸಮೀಪಿಸುತ್ತಿರುವ ಈ ಕಾಲದಲ್ಲಿ ಮಾರ್ಗದರ್ಶಿಸಲು ಋಷಿಗಳು ಈಗಾಗಲೇ 144 ಜನರನ್ನು ಆಯ್ಕೆ ಮಾಡಿ ವಿಶೇಷ ತರಬೇತಿ ನೀಡುತ್ತಿದ್ದಾರೆ. ನಿಮ್ಮದೇ ಆದ ರೀತಿಯಲ್ಲಿ ಪ್ರಯತ್ನಗಳನ್ನು ಮಾಡಲು ಕಾಲ ಸನ್ನಿಹಿತವಾಗಿದೆ ಎಂಬುವುದನ್ನು ನೀವು ತಿಳಿಯಬೇಕು, ಹತಾಶರಾಗಬಾರದು. ನನಗೆ ಭರವಸೆಯಿದೆ. ವಿನಾಶ ಕಡಿಮೆಯಾಗುತ್ತದೆ, ಏಕೆಂದರೆ ಋಷಿಗಳು ಅದಕ್ಕಾಗಿ ಶ್ರಮಿಸುತ್ತಿದ್ದಾರೆ.

14–08–2011

ನಾವು ಶಾಂತಿಯನ್ನು ಅನುಭವಿಸಿಲ್ಲದಿದ್ದರೆ, ನಾವು ಸರಿಯಾಗಿ ಧ್ಯಾನ ಮಾಡಿಲ್ಲ ಎಂಬುವುದರ ಸೂಚನೆಯಾಗಿದೆ. ಧ್ಯಾನದಲ್ಲಿ ಎಲ್ಲೋ ಒಂದು ಕಡೆ, ನಾವು ಖಂಡಿತವಾಗಿ ಒಂದೆರಡು ಕ್ಷಣಗಳಾದರೂ ಶಾಂತಿಯನ್ನು ಅನುಭವಿಸುತ್ತೇವೆ. ನಾವು ಧ್ಯಾನಗಳ ಪ್ರಭಾವ ಮುಂದುವರಿಯಲು ಬಿಡಬೇಕು. ನೀವು ಪ್ರಾಮಾಣಿಕರಾಗಿದ್ದರೆ, ಖಂಡಿತವಾಗಿ ಧ್ಯಾನವನ್ನು ಅರಿತು ಅಭ್ಯಾಸ ಮಾಡಿ, ಪ್ರಗತಿಯನ್ನು ಪಡೆಯುವಿರಿ. ನೀವು ಪೂಜೆ, ಆಚರಣೆಗಳಲ್ಲಿ ನಂಬಿಕೆಯುಳ್ಳವರಾದರೆ, ಅಲ್ಲಿ ಕೂಡಾ ಪ್ರಾಮಾಣಿಕರಾಗಿರಿ. ಮಂತ್ರಗಳ ಅರ್ಥವನ್ನರಿಯಲು ಪ್ರಯತ್ನಿಸಿ. ಜೀವನದ ಎಲ್ಲ ವಿಷಯಗಳಲ್ಲಿ ಕಲಾಪ್ರದರ್ಶನದಲ್ಲಿ, ಪುಸ್ತಕಗಳ ಓದಿನಲ್ಲಿ, ಕೊಠಡಿಯನ್ನು ಸ್ವಚ್ಛಗೊಳಿಸುವುದರಲ್ಲಿ, ಎಲ್ಲದರಲ್ಲೂ ಪ್ರಾಮಾಣಿಕರಾಗಿರಿ.

ನಮ್ಮ ಸಂಬಂಧಿಕರ ಸಾವಿನ ವಾರ್ಷಿಕಗಳಲ್ಲಿ ವರ್ಷಾಬ್ದಿಕಗಳನ್ನು ಆಚರಿಸುತ್ತೇವೆ. ನಮ್ಮಲ್ಲಿ ಕೆಲವರು ಚೈತನ್ಯಗಳನ್ನು ಸಮರ್ಪಿಸುತ್ತಾರೆ. ಸಂಬಂಧಪಟ್ಟವರಿಗೆ ಇದು ತಲುಪುತ್ತದೆ. ನಾವು ಸತ್ತವರಿಗೆ ಸಂದೇಶಗಳನ್ನು ಕಳುಹಿಸಲು ಸಾಧ್ಯವಿಲ್ಲ, ಆದರೂ ಬಹಳ ಅಪರೂಪಕ್ಕೆ ಸಂದೇಶವನ್ನು ಅವಲಂಬಿಸಿ ಇದು ತಲುಪುತ್ತದೆ. ಇದು ಅತ್ಯಂತ ಆಳದ ಮಟ್ಟದಲ್ಲಿ, ಸೂಕ್ಷ್ಮಮಟ್ಟದಲ್ಲಿ ತಲುಪುತ್ತದೆ. ಆದರೆ ಅವರಿಗೆ ಇದು ತಿಳಿಯುವುದಿಲ್ಲ. ಕಠಿಣವೆನಿಸಿದರೂ, ನಾವು ಎಂದಾದರೂ ಒಂದು ದಿನ ಸಾವು ಸಂಪರ್ಕ ಕತ್ತರಿಸಿ ಹಾಕುತ್ತದೆ ಎಂಬುವುದನ್ನು ಒಪ್ಪಲೇಬೇಕು. ಅದು ವಾಸ್ತವ. ನಾವು ಬಹಳ ಅಪರೂಪಕ್ಕೆ ಸತ್ತವರನ್ನು ಭೇಟಿಯಾಗಬಹುದು. ಆದರೆ ಆತ್ಮಸಂಗಾತಿಯನ್ನು ಹೊರತುಪಡಿಸಿ, ಇದು ಸಾಮಾನ್ಯವಾಗಿ ಸಾಧ್ಯವಿಲ್ಲ. ಸತ್ತವರೊಂದಿಗೆ ಸಂಪರ್ಕಿಸುವುದಕ್ಕೆ ಅನುಮತಿ ಇಲ್ಲ.

ಜೀವನದಲ್ಲಿ ಪ್ರತಿಬಾರಿಯೂ ನಾವು ಕವಲುದಾರಿಯನ್ನು ತಲುಪಿದಾಗ, ಸರಿಯಾದ ದಿಕ್ಕನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನಮಗಿರುತ್ತದೆ. ನಾವು ತಪ್ಪುದಾರಿಯನ್ನು ಹಿಡಿದರೂ, ಸ್ವಲ್ಪ ಕಾಲ ಕಾದರೆ ಸರಿಯಾದ ದಾರಿ ಹಿಡಿಯಲು ಇನ್ನೊಂದು ಅವಕಾಶವಿರುತ್ತದೆ.

ಮಹಾಲಕ್ಷ್ಮಿ ಸಮೃದ್ಧಿಯ ಅಧಿದೇವತೆ. ಅವಳು ಲೌಕಿಕ ಮತ್ತು ಆಧ್ಯಾತ್ಮಿಕ ಐಶ್ವರ್ಯ, ಜ್ಞಾನ ಮೊದಲಾದವುಗಳನ್ನು ಹೊಂದಿದ್ದಾಳೆ. ಅವಳು ವೈರಾಗ್ಯ ಅಥವಾ ನಿರ್ಮೋಹವನ್ನು ನೀಡಬಲ್ಲಳು. ಅವಳು ಅಮರರಿಗೊಮ್ಮೆ ಹೇಳಿದಳು: 'ಎಲ್ಲರ ಬಯಕೆಗಳನ್ನು ಈಡೇರಿಸಬಹುದು, ಆದರೆ ಅಲ್ಲಿ ಒಂದು ನಿಯಮವಿದೆ. ನೀವು ಎರಡನ್ನೂ ಅಂದರೆ ಆಧ್ಯಾತ್ಮಿಕ ಹಾಗೂ ಲೌಕಿಕ ಲಾಭಗಳಿಗಾಗಿ ಪ್ರಾರ್ಥಿಸಬೇಕು.'

ಒಂದು ದೊಡ್ಡ ಸಭೆಯಲ್ಲಿ ಒಬ್ಬ ವ್ಯಕ್ತಿ, ಕಪ್ಪು ಜನರು ಪ್ರತಿಯೊಬ್ಬರ ದೇಹ–ಮನಸ್ಸು–ಬುದ್ಧಿಯ ವ್ಯವಸ್ಥೆಗೆ ತಮ್ಮ ಚೈತನ್ಯಗಳನ್ನು ತುಂಬುತ್ತಿದ್ದುದನ್ನು ನೋಡಿದರು. ಆಕೆ ಹೇಳಿದರು: 'ನನ್ನ ಧ್ಯಾನಗಳಿಗೆ ತೊಂದರೆಯಾಯಿತು, ನನಗೆ ಧ್ಯಾನ ಮಾಡಲಾಗಲಿಲ್ಲ.' ನಂತರ ಅಮರರು ಆ ಎಲ್ಲ ಕಪ್ಪು ಚೈತನ್ಯಗಳನ್ನು ನಿವಾರಿಸಿ, ಸಕಾರಾತ್ಮಕ ಚೈತನ್ಯಗಳನ್ನು ತುಂಬಿದ್ದನ್ನು ಆಕೆ ನೋಡಿದರು. ಆ ದರ್ಶನದ ನಂತರ ಆಕೆಗೆ ಧ್ಯಾನ ಮಾಡಲು ಸಾಧ್ಯವಾಯಿತು. ಇವೆಲ್ಲವೂ ಆಕೆಯ ಕಲ್ಪನೆಯಾಗಿತ್ತು. ನಿಮಗೆ ಒಂದು ಅನುಭವವಾದರೆ ಸಂತೋಷಪಡಿ, ಆದರೆ ಅದರಿಂದಾಚೆಗೆ ಹೋಗಿ.

21–08–2011

ಬೆಳಕಿನ ಸಾಗರವನ್ನು ಅನುಭವಿಸುವುದರಿಂದ ಅಪಾರ ಶಾಂತಿ ಲಭಿಸುತ್ತದೆ. ನಾವು ಶಾಂತಿ ಮತ್ತು ನೀರವತೆಯಿಂದ ಕೂಡಿದ್ದಾಗ ವಾಸ್ತವತೆಗಳನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತೇವೆ; ಬೆಳಕು ಸತ್ಯವನ್ನು ಒಪ್ಪಿಕೊಳ್ಳಲು ಶಕ್ತಿ ಮತ್ತು ವಿವೇಕಗಳನ್ನು ಸಹ ಕೊಡುತ್ತದೆ.

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ನಮ್ಮ ದೇಶದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಳನ ಒಂದು ಪ್ರತ್ಯೇಕ, ಏಕೈಕ ಚಳುವಳಿಯಲ್ಲ. ಇದು ಭ್ರಷ್ಟಾಚಾರ, ಸರ್ವಾಧಿಕಾರ, ಅಧಿಕಾರದ ದುರ್ಬಳಕೆಯನ್ನು ತಿರಸ್ಕರಿಸುವ ಬೃಹತ್ತಾದ ಅಧ್ಯಾತ್ಮ ಪ್ರಕ್ರಿಯೆಯ, ಪ್ರಳಯದ ಪರಿವರ್ತನೆಯ ವಿಧಾನದ ಒಂದು ಭಾಗವಾಗಿದೆ. ಹೊಸ ಚೈತನ್ಯಗಳು ಮತ್ತು ಅನೇಕ ಜನರು ಚಾನಲ್ ಮಾಡಿರುವ ಬೆಳಕಿನ ಪರಿಣಾಮ ಇದರ ಮೇಲೆ ಉಂಟಾಗಿದೆ. ಋಷಿಗಳಿಂದ ಒಂದು ಸ್ಪಷ್ಟ ಮತ್ತು ಗಟ್ಟಿಯಾದ ಸಂದೇಶ ಹೇಳುವುದೇನೆಂದರೆ: ನಾವು ನಮ್ಮದೇ ಆದ ಸ್ವಂತ, ಏಕಾಂತ, ಪ್ರಶಾಂತ ಸ್ಥಳಗಳಲ್ಲಿ ಕುಳಿತುಕೊಂಡು ಬೆಳಕನ್ನು ಚಾನಲ್ ಮಾಡಿ, ಹೊಸಯುಗವನ್ನು ಕಟ್ಟಲು ಈ ಆಂದೋಳನವನ್ನು ಬಲಪಡಿಸಬೇಕು.

ಋಷಿಗಳ ಮಾರ್ಗದರ್ಶನದಲ್ಲಿ ಒಮ್ಮೆ ನೀವು ಧ್ಯಾನ ಕೈಗೊಂಡು ಮುಂದುವರಿದರೆ, ನೀವು ಋಷಿಗಳ ನೆಟ್‌ವರ್ಕ್‌ಗೆ ಸಂಪರ್ಕ ಪಡೆಯುವಿರಿ. ನಿಮಗೆ ಸಹಾಯ ಮಾಡಲು ಅದ್ಭುತ ಬುದ್ಧಿಶಕ್ತಿಗಳು ಯಾವಾಗಲೂ ಗಮನಿಸುತ್ತಿರುತ್ತವೆ. ಆದ್ದರಿಂದ ನಿಮ್ಮ ಮನಸ್ಸಿನಲ್ಲೊಂದು ಪ್ರಶ್ನೆ ಉದ್ಭವಿಸಿದರೆ, ಉತ್ತರ ಕೂಡಾ ಜೊತೆಯಲ್ಲಿ ಹುಟ್ಟುತ್ತದೆ. ಉತ್ತರ ನಿಮ್ಮನ್ನು ಕೆಲವು ಸಲ ತಲುಪುತ್ತದೆ ಅಥವಾ ಪ್ರಶ್ನೆ ನೆಟ್‌ವರ್ಕ್ ಅನ್ನು ಪ್ರವೇಶಿಸಿ, ನೀವು ಕೇಳದಿದ್ದರೂ ಉತ್ತರ ನಿಮಗೆ ದೊರೆಯುತ್ತದೆ.

ಧ್ಯಾನಾಭ್ಯಾಸದ ಕಾಲದಲ್ಲಿ ಕೆಲವು ಸಲ ನಾವು ಮಂತ್ರದ ಪುನರುಚ್ಚಾರ ಮಾಡುವುದನ್ನು ನಿಲ್ಲಿಸಿರುತ್ತೇವೆ ಎಂಬುವುದನ್ನು ಗಮನಿಸುತ್ತೇವೆ. ನಮ್ಮ ಅರಿವು, ಮನಸ್ಸಿಗಿಂತಲೂ ಆಚೆ ಹೋಗಿರುವುದರಿಂದ ಅದು ಹಾಗೆಯೇ ಆಗುವುದು ಸರಿ. ನೀವು ಮಂತ್ರದ ಪುನರುಚ್ಚಾರ ಮಾಡುವುದು ಮರೆತಿರುವುದನ್ನು ತಿಳಿದ ಮೇಲೆ ಮತ್ತೆ ಮಂತ್ರವನ್ನು ಉಚ್ಚರಿಸಲು ಪ್ರಾರಂಭಿಸಬಹುದು. ಒಂದು ಘಂಟೆಯ ಧ್ಯಾನದ ಕಾಲದಲ್ಲಿ ಇಂಥ ಸನ್ನಿವೇಶಗಳು ಅನೇಕ ಸಲ ಸಂಭವಿಸಬಹುದು. ಧ್ಯಾನ ಕಾಲದಲ್ಲಿ ನಾವು ಬೆಳಕನ್ನು ನೋಡಲು ಸಾಧ್ಯವಿಲ್ಲ. ಬೆಳಕನ್ನು ಅನುಭವಿಸುವುದರ ಕಡೆಗೆ ನಮ್ಮ ಗಮನವನ್ನು ಕೇಂದ್ರೀಕರಿಸೋಣ.

ಋಷಿಗಳ ನೆಟ್‌ವರ್ಕ್‌ನಲ್ಲಿ ಇಲ್ಲದವರಿಗೆ ಕೂಡಾ ದೇವರು ವಿಶಿಷ್ಠ ರೀತಿಯಲ್ಲಿ ಸಹಾಯ ಮಾಡುತ್ತಾನೆ. ನಾವು ಅದನ್ನು ಗಮನಿಸುವುದಿಲ್ಲ.

ಪ್ರತಿ ಚೆಕಪ್ ಒಂದು 'ದೀಕ್ಷೆ'. ಆ ಸಂದರ್ಭದಲ್ಲಿ ನಮಗೆ ಹೊಸ ಚೈತನ್ಯವನ್ನು ಗೊತ್ತಾದ ಪ್ರಮಾಣದಲ್ಲಿ ನೀಡಲಾಗುತ್ತದೆ. ಆಗ ಒಂದು ಬದಲಾವಣೆ ಉಂಟಾಗುತ್ತದೆ. ನೀವು ಕ್ರಮಬದ್ಧವಾಗಿ ಧ್ಯಾನ ಮಾಡದಿದ್ದರೂ ಚೆಕಪ್‌ಗಳಿಗೆ ಹಾಜರಾಗಿ, ಅದರಿಂದ ನಿಮಗೆ ಸಹಾಯ ಸಿಗುತ್ತದೆ. ಇಂತಹ ಸಮಯದಲ್ಲಿ, ಕೆಲವು ಸಮಸ್ಯೆಗಳು ಅಥವಾ ಕರ್ಮಗಳು ಧ್ಯಾನಾಭ್ಯಾಸಕ್ಕೆ ಅಡಚಣೆ ಉಂಟು ಮಾಡುತ್ತಿರುವುದನ್ನು ಋಷಿಗಳು ಗಮನಿಸಿದರೆ ಅದನ್ನು ತೆಗೆದು ಹಾಕುತ್ತಾರೆ. ಕೆಲವು ಬಾರಿ ನಾವು ಚೆನ್ನಾಗಿ ಧ್ಯಾನ ಮಾಡಿದರೆ ಋಷಿಗಳು ಕೊಡುಗೆಗಳನ್ನು ನೀಡುತ್ತಾರೆ.

1,44,000 ಋಷಿಗಳು ಮತ್ತು ಅವರ ಕೇಂದ್ರಗಳು ಸೇರಿ ಒಂದು ನೆಟ್‌ವರ್ಕ್ ಆಗುತ್ತದೆ. ಅಮರರು ಜೀವಿಸಿದ್ದ ಹಾಗೆ ಅವರು ಕೂಡಾ ನಮ್ಮೊಡನೆ ಜೀವಿಸುತ್ತಿದ್ದಾರೆ. ಅವರು ಪ್ರಪಂಚದ ಎಲ್ಲೆಡೆ ವಾಸವಾಗಿದ್ದಾರೆ.

28-08-2011

ನಾವು ಅಮರರನ್ನು ಗೌರವಿಸುತ್ತೇವೆ, ಚೈತನ್ಯಗಳನ್ನು ಸಮರ್ಪಿಸಿ ಆರಾಧಿಸುತ್ತೇವೆ ಮತ್ತು ಅನುಸರಿಸುತ್ತೇವೆ. ಇದು ನನಗೆ ಬಹಳ ಸಂತೋಷ ಕೊಟ್ಟಿದೆ. ನಾವು ಅಮರರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ. ಅವರನ್ನು ಎಂದಿಗೂ ದೇವರಂತೆ ಪೂಜಿಸುವುದಿಲ್ಲ. ಅಮರರು ಸತ್ಯದ ಪ್ರತಿರೂಪ. ಅಮರರ ಬೋಧನೆಗಳನ್ನು ಪಾಲಿಸಿದರೆ ಅವರಿಗೆ ಅತ್ಯುತ್ತಮ ಗುರುದಕ್ಷಿಣೆ ನೀಡಿದಂತಾಗುತ್ತದೆ.

ಅಮರರು ಋಷಿಗಳ ಅಸ್ತಿತ್ವವನ್ನು ಎಲ್ಲರಿಗೂ ತಿಳಿಸಿ ಅವರನ್ನು ಸಂಪರ್ಕಿಸಬಹುದು ಎಂಬುವುದನ್ನು ತೋರಿಸಿಕೊಟ್ಟಿದ್ದಾರೆ. ಅವರು ಕೆಳತಂದು ಕೊಟ್ಟಿರುವ ಜ್ಞಾನ ಅದ್ಭುತ ಮತ್ತು ಅನುಪಮ.

ಅಮರರು ನಮಗೆ ಶಂಬಲ ಮತ್ತು ಶಂಬಲ ನಿಯಮಗಳನ್ನು ಪರಿಚಯ ಮಾಡಿಸಿದರು. ಮುಕ್ತಿಯನ್ನು ಗಳಿಸಲು ಯಾವುದಾದರೂ ಒಂದು ಶಂಬಲ ನಿಯಮವನ್ನು ಪಾಲಿಸಿದರೆ ಸಾಕು. ಋಷಿಗಳು ಕಲಿಯುಗಕ್ಕೆ ವಿದಾಯ ಹೇಳಿ, ಸತ್ಯಯುಗವನ್ನು ಬರಮಾಡಿಕೊಳ್ಳುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಮರರು 1974ರಲ್ಲಿ ಕಲಿಯುಗ ಮುಗಿಯಿತೆಂದು ಪ್ರಕಟಿಸಿದರು. ಅವರು 1987ರಲ್ಲಿ ಪ್ರಳಯ ಪ್ರಾರಂಭವಾಯಿತೆಂದು ಹೇಳಿದರು. ಪ್ರಳಯ ಪ್ರಾರಂಭವಾಗಿದೆ ಮತ್ತು ನಾವು ಅದನ್ನು ನೋಡುತ್ತಿದ್ದೇವೆ.

ಅಮರರು ಧ್ಯಾನಿಗಳಿಗೆ ನಿಯತಕಾಲಿಕ 'ಚೆಕಪ್'ಗಳನ್ನು ಪ್ರಾರಂಭಿಸಿದರು. ವಿದ್ಯಾರ್ಥಿಗೆ ಗುರುವನ್ನು ಭೇಟಿ ಮಾಡುವ ಅವಕಾಶ ದೊರಕಿ, ತಮ್ಮ ಅನುಭವಗಳನ್ನು ಹಂಚಿಕೊಂಡು, ಅನುಮಾನಗಳನ್ನು ಮತ್ತು ಕಷ್ಟಗಳನ್ನು ಪರಿಹರಿಸಿಕೊಂಡು ಹೊಸ ಸೂಚನೆಗಳನ್ನು ಪಡೆದುಕೊಳ್ಳಲು ಇದೊಂದು ಅವಕಾಶ. 'ಚೆಕಪ್' ಈ ಮಾರ್ಗದ ಅನನ್ಯ ಲಕ್ಷಣವಾಗಿದೆ.

ಅಮರರು ಹೇಳಿದರು: 'ಸಂಖ್ಯೆಯನ್ನು ಹೆಚ್ಚಿಸುವುದು ಬೇಡ'. ನನ್ನೊಂದಿಗೆ ಈಗ ಜನರು ಕಡಿಮೆಯಿದ್ದರೂ ಅಷ್ಟೇ ಸಾಕು. ನಾವು ಈ ಪ್ರಪಂಚಕ್ಕೆ ಹೊಸ ವಿಧಿಬರಹವನ್ನು ಸೃಷ್ಟಿಸಬಹುದು.

ಅಮರರು ಮಾನಸಿ ವಲಯ ನಿರ್ಮಾಣಗೊಳ್ಳುವಂತೆ ಮಾಡಿದರು. ಅವರು ಬೇರೆ ಗ್ಯಾಲಕ್ಸಿಗಳಿಂದ ಅನೇಕರನ್ನು ಈ ಸ್ಥಳಕ್ಕೆ ಭೇಟಿನೀಡಲು ಕರೆತಂದರು.

ಅವರ ಬೋಧನೆಗಳೆಲ್ಲ ಸರಳ – ಧ್ಯಾನಿಸಿ ಮತ್ತು ಸಕಾರಾತ್ಮಗೊಳಿಸಿ; ಸ್ವಾಭಾವಿಕವಾಗಿ, ಪೂರ್ಣವಾಗಿ ಮತ್ತು ಸರಿಯಾಗಿ ಬಾಳಿರಿ, ಅಹಂಕಾರವನ್ನು ಬಿಡಿ ಮತ್ತು ಲೌಕಿಕ ಜೀವನವನ್ನು ಅಲಕ್ಷಿಸಬೇಡಿ. ಇಂತಹ ದಿನಗಳಲ್ಲಿ ನಮ್ಮ ಜೀವನವನ್ನು ಆಧ್ಯಾತ್ಮಿಕತೆಗೆ, ಬೆಳಕನ್ನು ಅಭಿವ್ಯಕ್ತಿಸುವುದಕ್ಕೆ ಮರುಸಮರ್ಪಣೆ ಮಾಡೋಣ.

2012ನ್ನು ಎದುರಿಸಲು ನಮಗೆ ನೀಡಲಾಗಿರುವ ವಿಶೇಷ ತಂತ್ರಗಳನ್ನು ನಾನು ಆರಿಸಿಕೊಂಡಿರುವ ಜನರಿಗೆ ವರ್ಗಾಯಿಸುತ್ತೇನೆ, ನಂತರ ನಾನು ಅದನ್ನು ಎಲ್ಲರಿಗೆ ವರ್ಗಾವಣೆ ಮಾಡುತ್ತೇನೆ.

ಇನ್ನು ಮುಂದೆ ನಾವು ಪ್ರತಿ ಶನಿವಾರ, ಪ್ರಪಂಚದ ಎಲ್ಲ ಕಡೆಗಳಿಂದ ಸ್ವಇಚ್ಛೆಯಿಂದ ಬಂದವರಿಗೆ ಸೂಕ್ಷ್ಮಮಟ್ಟದ ತರಗತಿಗಳನ್ನು ನಡೆಸುತ್ತೇವೆ. ಈ ತರಗತಿಗಳಿಗೆ ಸೇರಲು ಬಯಸುವವರು ಋಷಿಗಳೊಂದಿಗೆ ಮಾನಸಿಕವಾಗಿ ನೊಂದಾಯಿಸಿಕೊಳ್ಳಬೇಕು. ಋಷಿಗಳು ಸೂಕ್ಷ್ಮ-ಕಾರ್ಯಗಳಿಗೆ ಕಾರ್ಯಕರ್ತರನ್ನು ತೆಗೆದುಕೊಳ್ಳುತ್ತಾರೆ ಮತ್ತು ಅವರಿಗೆ ತರಬೇತಿ ನೀಡಲಾಗುವುದು. 'ರಾ' ಗ್ರೂಪ್ ಸೇರಬಯಸುವವರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು. 'ರಾ' ಗ್ರೂಪ್‌ನಲ್ಲಿರುವ ಜನರು 'ರಾ' ಮಂದಿರಕ್ಕೆ ಭೇಟಿಕೊಟ್ಟು ಅಲ್ಲಿ ಸ್ವಲ್ಪಕಾಲ ಇದ್ದರೆ, ಅಷ್ಟೇ ಸಾಕು.

ಬೆಳಕನ್ನು ಚಾನಲ್ ಮಾಡಿದ ಪ್ರತಿಯೊಬ್ಬರನ್ನೂ ನಾನು ಅಭಿನಂದಿಸಲು ಬಯಸುತ್ತೇನೆ, ಏಕೆಂದರೆ ಬೆಳಕನ್ನು ಚಾನಲ್ ಮಾಡಿದುದರ ಫಲಿತಾಂಶವನ್ನು ನೀವೆಲ್ಲರೂ ನೋಡಬಹುದಾಗಿದೆ. ಇನ್ನೂ ಹೆಚ್ಚಿನ ಸಂಚಲನಗಳು ಮತ್ತು ಮೌನ ಆಂದೋಳನಗಳು ಆಗುವುವು. ಬೆಳಕು ಜನರ ಹೃದಯಗಳನ್ನು ತಲುಪುತ್ತದೆ, ಅವಕಾಶಗಳನ್ನು ಒದಗಿಸುತ್ತದೆ, ಅದು ಉಪದೇಶಿಸುತ್ತದೆ ಆದರೆ ಜನರು ನಿರ್ಧರಿಸಬೇಕು. ಭವಿಷ್ಯದ ದಿನಗಳು ಅತ್ಯಂತ ಸವಾಲನ್ನು ಒಡ್ಡುವ ರೋಮಾಂಚನಕಾರಿ ದಿನಗಳಾಗಿವೆ. ಈ ವಿಧಾನಗಳ ಬಗ್ಗೆ ಜಾಗೃತಿಯಿಂದಿರೋಣ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಅದ್ಭುತ ಮೇಳ

(ಪ್ರಗತಿ ರಾಜ್; ಅನು: ಸುಧಾಕರ್)

ಪರದೆ ಮೇಲೇರಿದೆ ಮತ್ತು ಬೆಳಕಿನಯುಗದ ಕಡೆಗಿನ ಒಂದು ಅಮೋಘ ಕೆಲಸದ ಪ್ರಕ್ರಿಯೆ ಪ್ರಾರಂಭವಾಗಿದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಸ್ಥಾನವನ್ನು ಅಲಂಕರಿಸಿ ತಾವು ತೆಗೆದುಕೊಂಡಿರುವ ಕೆಲಸಕ್ಕೆ ಅತ್ಯುತ್ತಮವಾದುದನ್ನು ಕೊಡಲು ಪ್ರಯತ್ನಿಸುತ್ತಿದ್ದಾರೆ.

ಮಾನಸದಲ್ಲಿ, ಒಂದು ಗುಂಪು ಎಂದಿನಂತೆ ಮೌನವಾಗಿ ಯಾವ ಅಡೆತಡೆಯಿಲ್ಲದೆ ಸುಗಮವಾಗಿ ಮಾನಸದ ಕಾರ್ಯಭಾರವನ್ನು ನಡೆಸುತ್ತಿದೆ. ಇನ್ನೊಂದು ಗುಂಪು ಆಧ್ಯಾತ್ಮಿಕ ಸತ್ಯಗಳನ್ನು ಅಧ್ಯಯನ ಮಾಡಲು ಮೀಸಲಾಗಿರುವ 'ಅಧ್ಯಯನ ಕೇಂದ್ರ'ದಲ್ಲಿ ಹೊಸ ವಾಸ್ತವಾಂಶಗಳನ್ನು ಅವಿರತವಾಗಿ ಸೇರಿಸುವುದರಲ್ಲಿ ತೊಡಗಿದೆ. ಬೆಳಕು ತನಗೆ ತಾನೇ ಹರಡಲು ಬೆಳಕಿಗೆ ಉಪಕರಣವಾಗಿರುವ ಧ್ಯಾನಿಗಳಿದ್ದಾರೆ. ದಿನನಿತ್ಯದ ತಮ್ಮ ಜೀವನದಲ್ಲಿ ಮಗ್ನರಾಗಿದ್ದರೂ ಬೆಳಕನ್ನು ಮತ್ತು ಪ್ರೀತಿಯನ್ನು ಹರಡುವಲ್ಲಿ ಕೊಡುಗೆ ನೀಡುತ್ತಿರುವ ಧ್ಯಾನಿಗಳಿದ್ದಾರೆ. ಶಾಲಾಮಕ್ಕಳ ಮುಖಾಂತರ ದಿನನಿತ್ಯವೂ ಬೆಳಕನ್ನು ಕೆಳತರುತ್ತಿರುವ ಲೈಟ್ ಚಾನಲ್ ಕಾರ್ಯಕರ್ತರು ತಮ್ಮದೇ ರೀತಿಯಲ್ಲಿ ಕೊಡುಗೆ ನೀಡುತ್ತಿದ್ದಾರೆ.

ಈ ಅದ್ಭುತ ಮೇಳದಲ್ಲಿ ನಮ್ಮೆಲ್ಲರಿಗೂ ಪಾತ್ರವಿದೆ. ಬರಿ ಧ್ಯಾನಿಯಿರಲಿ ಅಥವಾ ಕಾರ್ಯಕರ್ತನಾಗಿರಲಿ, ನಾವು ಪ್ರತಿಯೊಬ್ಬರೂ ವಿಶೇಷ. ಪ್ರತಿದಿನವೂ ಜವಾಬ್ದಾರಿಯಿಂದ ತಮ್ಮ ತಮ್ಮ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಇದು ನಮ್ಮೆಲ್ಲರನ್ನೂ ಒಗ್ಗಟ್ಟಿನಿಂದ ಮುನ್ನಡೆಸುತ್ತದೆ ಮತ್ತು ಏಕಕಾಲದಲ್ಲಿ ನಡೆಯುವ ಈ ಸುಂದರ ಮೇಳ ಅದ್ಭುತ ಭವಿಷ್ಯವನ್ನು ಸೃಷ್ಟಿಸುತ್ತದೆ.

ಹೇಗೆ ಸಂಗೀತ ಮೇಳದಲ್ಲಿ ಪ್ರತಿಯೊಂದು ರಾಗ ಮತ್ತು ವಿವಿಧ ವಾದ್ಯಗಳನ್ನು ನುಡಿಸುವ ಪ್ರತಿಯೊಬ್ಬ ವಾದ್ಯಗಾರನೂ ಸಮಾನವಾಗಿ ಮುಖ್ಯನಾಗಿರುತ್ತಾನೆಯೋ ಹಾಗೆಯೇ, ನಮ್ಮ ಮಾನಸ ಕುಟುಂಬದ ಎಲ್ಲ ವಿಭಾಗಗಳೂ ಕೂಡಾ ಮುಖ್ಯ.

ಅನೇಕ ಅಹಿತ ವಾಸ್ತವಗಳು ಪ್ರಪಂಚದ ಎಲ್ಲೆಡೆ ಪ್ರಕಟಗೊಳ್ಳುತ್ತಿರುವುದನ್ನು ನೋಡಿದಾಗ ಸತ್ಯಯುಗದ ಪ್ರಾರಂಭ ದೂರವೇ ಉಳಿದಿರುವಂತೆ ಅನ್ನಿಸುತ್ತದೆ. ಆದರೆ ಸೂಕ್ಷ್ಮವಾಗಿ ಅವಲೋಕಿಸಿದಾಗ ಬೆಳಕು ಆರಂಭಿಸಿರುವ ವ್ಯಾಪಕ ಬದಲಾವಣೆಗಳಿಂದಾಗಿ ಹೊಸಯುಗ ಪ್ರಾರಂಭದ ಆಶಾಕಿರಣ ಮೂಡುತ್ತದೆ.

ಮಾನಸದಲ್ಲಿ ನಡೆಯುವ ಅದ್ಭುತ ಮೇಳದಲ್ಲಿ ಮಾನವಮಟ್ಟದಲ್ಲಿ ಮತ್ತು ನಮಗೆ ತಿಳಿಯದಿರುವ ಮಟ್ಟಗಳಲ್ಲಿ ಅವರವರ ಪಾತ್ರವನ್ನು ನಿರ್ವಹಿಸಲು, ಸಮರ್ಥ, ದಕ್ಷ ಮಾಸ್ಟರ್ ತಂಗಾಳಿಯಂತೆ ಮೌನವಾಗಿ ಮಾರ್ಗದರ್ಶಿಸುತ್ತಿದ್ದಾರೆ. ■

## ಪತ್ರಗಳು

(ಸಂ: ಶೋಭಾ ಕೆ. ರಾವ್; ಅನು: ಸುಧಾಕರ್)

ಮತ್ತೊಂದು ರಾಷ್ಟ್ರಮಟ್ಟದ ಕ್ರಾಂತಿಯ ಸಂಚಲನ ರೂಪುಗೊಳ್ಳುತ್ತಿರುವುದನ್ನು ನೋಡುವುದು ಹೃದಯಸ್ಪರ್ಶಿಯಾಗಿದೆ. ಈಗ ಇಡೀ ಪ್ರಪಂಚದ ದೃಷ್ಟಿ ಭಾರತದತ್ತ ತಿರುಗಿದೆ. ಸಂಘಟಿತ ಧ್ವನಿ ಪ್ರಬಲವಾಗಿದೆ ಮತ್ತು ಇದರ ಪ್ರಭಾವ ನಮ್ಮ ಭೂಮಿಯ ಮೇಲೆ ಎದ್ದು ಕಾಣುತ್ತಿದೆ.

– ಪದ್ಮಜಾ ಬಾಲಾಜಿ

ನೀವು ನಮ್ಮೊಳಗೆ ಆಳವಾದ ಪ್ರಭಾವವನ್ನು ಬೀರಿದ್ದೀರಿ ಮತ್ತು ನಂಬಿಕೆಯನ್ನು ಹುಟ್ಟಿಸಿದ್ದೀರಿ. ಈ ನಂಬಿಕೆಯಲ್ಲಿರುವ ಚೈತನ್ಯ ಮತ್ತು ಪ್ರೀತಿಯಿಂದ ನಾವು ಎಂತಹ ಸಂದರ್ಭವನ್ನಾದರೂ ದಾಟಬಹುದಾಗಿದೆ. ಇದು, ನಾವು ನಿಮ್ಮ ಮಾರ್ಗದರ್ಶನದಲ್ಲಿ ಇರುವುದರಿಂದ ಸ್ವಯಂಪ್ರಕಟಗೊಂಡ ಸಂತೋಷದ ಒಂದು ರೀತಿ. ನಿಮ್ಮ ಕೆಲಸದ ಅಗಾಧತೆ ಮತ್ತು ವ್ಯಾಪ್ತಿಯ ಬಗ್ಗೆ ನಾವು ಹೆಚ್ಚುಹೆಚ್ಚು ಯೋಚಿಸಿದಾಗ, ಹೆಚ್ಚುಹೆಚ್ಚು ವಿನೀತರಾಗುತ್ತೇವೆ.

– ಉಷಾ ಸತೀಶ್ಚಂದ್ರ

ನಿಮ್ಮಿಂದ ಆಶೀರ್ವಾದ ಪಡೆಯುತ್ತಿದ್ದಾಗ ನಾನು ನಿಮ್ಮ ಕಣ್ಣುಗಳನ್ನು ನೋಡುತ್ತಿದ್ದೆ ಎಂದೆನಿಸಲಿಲ್ಲ, ಏಕೆಂದರೆ ನಾನು ಅನಂತತೆ ಮತ್ತು ಗಾಢತೆಯನ್ನು ನಿಮ್ಮ ಕಣ್ಣುಗಳಲ್ಲಿ ಕಂಡೆ. ಅದು ಒಂದು ದೊಡ್ಡ ಆವರಣದಂತೆ ಮತ್ತು ಯಾರು ಬೇಕಾದರೂ ಧುಮುಕಲು ಇಷ್ಟವಾಗುವಂಥ ಸುಳಿಯಂತಿತ್ತು! ಆ ಸಮಯದಲ್ಲಿ ಅದು ಏನಿರಬಹುದು ಎಂದು ಆಶ್ಚರ್ಯಪಟ್ಟೆ, ಅದು ಅದ್ಭುತ ಶಕ್ತಿಯಿರಬಹುದೆಂದು ಯೋಚಿಸಿದೆ, ಆದರೆ ಈಗ ನನಗೆ ತಿಳಿದಿದೆ ನೀವು ಯಾವಾಗಲೂ ಅನಂತತೆಯನ್ನು ನಿಮ್ಮಲ್ಲಿಯೇ ಹೊಂದಿದ್ದೀರಿ ಎಂದು! ನೀವು ನಮ್ಮನ್ನು ಎಲ್ಲ ಮಟ್ಟಗಳಲ್ಲೂ ಸಂಪರ್ಕಿಸುತ್ತೀರಿ. ನಿಮ್ಮನ್ನು ಪಡೆದಿರುವ ನಾವು ಅದೃಷ್ಟಶಾಲಿಗಳು.

– ವಿದ್ಯಾ ವಿಶ್ವಾಮಿತ್ರ

ತಪೋನಗರದ ಕಟ್ಟಡಗಳ ಜೊತೆ ನಾನು ಸಂಪರ್ಕ ಕಲ್ಪಿಸಿಕೊಳ್ಳುವುದರಿಂದ, ಋಷಿಗಳಿಗೆ ಮತ್ತು ನಿಮಗೆ ನಾನು ಹತ್ತಿರದವಳಾದಂತೆ ಅನಿಸುತ್ತದೆ. ನೀವು ಹೇಳುತ್ತಿರುವುದೆಲ್ಲವೂ ಅಭಿವ್ಯಕ್ತಿಗೊಳ್ಳುತ್ತಿವೆ ಮತ್ತು ಅವೆಲ್ಲವೂ ವಾಸ್ತವ ಸತ್ಯ ಎಂದು ದೃಢೀಕರಣಗೊಳ್ಳುತ್ತಿವೆ. ಹಕ್ಕಿಗಳು ತಮ್ಮ ಸಂವಾದದ ಭಾಷೆಯನ್ನೇ ಬದಲಾಯಿಸಿಕೊಂಡಂತೆ ಮತ್ತು ತಮ್ಮನ್ನು ಬೇರೆ ರೀತಿಯಲ್ಲಿ ವ್ಯಕ್ತಪಡಿಸಿಕೊಳ್ಳುತ್ತಿರುವಂತೆ ಅನಿಸುತ್ತಿದೆ. ಬಹುಶಃ, ಇದು ನಾನು ಬದಲಾಗಿರುವುದರಿಂದ ಮತ್ತು ನನ್ನಲ್ಲಿಯೇ ಹೊಸತನವನ್ನು ಕಾಣುತ್ತಿರುವುದರಿಂದ ಆಗಿರಬಹುದು!

– ಜಯಂತಿ ನಟರಾಜನ್

## ಪ್ರಶ್ನೆಗಳು ಮತ್ತು ಉತ್ತರಗಳು

**(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)**

**ಪ್ರ: ಶಂಬಲದ ಜನರು ವಿಕಾಸದ ಉನ್ನತ ಮಟ್ಟದಲ್ಲಿರುವ ಮಾನವರೇ ಅಥವಾ ಸೂಕ್ಷ್ಮ ಆಯಾಮದಲ್ಲಿ ಬದುಕುವ ಬೆಳಕಿನ ಜೀವಿಗಳೇ?**

ಉ: ಶಂಬಲವು ಒಂದು ವಿಭಿನ್ನ ಆಯಾಮ ಅಥವಾ ವಿಭಿನ್ನ ಕಂಪನದಲ್ಲಿದೆ. ವಿಕಾಸದ ಉನ್ನತ ಮಟ್ಟದಲ್ಲಿರುವ ಮಾನವರು ಅಲ್ಲಿ ಲಕ್ಷಾಂತರ ವರುಷಗಳಿಂದ ಜೀವಿಸುತ್ತಿದ್ದಾರೆ. ಬೆಳಕಿನ ಜೀವಿಗಳು ಶಂಬಲಕ್ಕೆ ಭೇಟಿ ನೀಡುತ್ತಾರೆ. ಅವರಲ್ಲಿ ಕೆಲವರು ಅಲ್ಲಿ ಜೀವನ ಸಾಗಿಸಬಹುದು. ಅವತಾರಗಳು ಶಂಬಲದಲ್ಲಿ ಜೀವಿಸುತ್ತಾರೆ. ಈಗ ಭಗವಾನ್ ಕಲ್ಕಿ, ಪರಶುರಾಮ ಅಲ್ಲಿ ಜೀವಿಸುತ್ತಿದ್ದಾರೆ. ಯಾರು ಉನ್ನತ ಮಟ್ಟಕ್ಕೆ ವಿಕಾಸ ಹೊಂದುವವರೋ, ತಮ್ಮಲ್ಲಿ ತಾವೇ ಆಧ್ಯಾತ್ಮಿಕವಾಗಿ ಸಿದ್ಧರಾಗಿರುವವರೊ ಅವರು ಈಗಲೂ ಶಂಬಲಕ್ಕೆ ಹೋಗಬಹುದು. ಅದಕ್ಕಿರುವ ಒಂದೇ ಶರತ್ತೆಂದರೆ ಅವರು ಯಾವಾಗಲೂ ಪ್ರೀತಿಯನ್ನು ವ್ಯಕ್ತಪಡಿಸುತ್ತಿರಬೇಕು.

**ಪ್ರ: ಯಾವುದರ ಮೇಲಾದರೂ ಧ್ಯಾನಿಸುವುದು ಅಥವಾ ಋಷಿಗಳನ್ನು ಸಂಪರ್ಕಿಸುವುದು, ದೇವರ ಮೇಲೆ (ಉದಾ:ಶಿವ) ಧ್ಯಾನಿಸುವುದು ಅಥವಾ ದೇವರನ್ನು ಸಂಪರ್ಕಿಸುವುದಕ್ಕಿಂತ ವಿಭಿನ್ನ ಹೇಗೆ?**

ಉ: 'ಯಾವುದರ ಮೇಲಾದರೂ ಧ್ಯಾನಿಸುವುದು' ಎಂದು ಹೇಳುವುದು ತಪ್ಪು. ನಾವು ಯಾವುದರ ಮೇಲೂ ಧ್ಯಾನಿಸುವುದಿಲ್ಲ. ನಾವು ಧ್ಯಾನ ಮಾಡಿ, ನಿಶ್ಶಬ್ದತೆಯನ್ನು ಪ್ರವೇಶಿಸುತ್ತೇವೆ ಮತ್ತು ಸಮಾಧಿಯನ್ನು ಅನುಭವಿಸುತ್ತೇವೆ. ನಮ್ಮಲ್ಲಿ ಪ್ರೀತಿಯಿದ್ದಾಗ ಋಷಿಗಳೊಂದಿಗೆ ಅಥವಾ ದೇವರೊಂದಿಗೆ ಸಂಪರ್ಕ ಉಂಟಾಗುತ್ತದೆ. ಒಂದು ಸರಳ ತಂತ್ರವೆಂದರೆ, ಒಬ್ಬ ಋಷಿಯ ಆಕಾರವನ್ನು ನಿಮ್ಮೆದುರು ಊಹಿಸಿಕೊಂಡು, ಆಮೇಲೆ ನಿಮ್ಮನ್ನು ಮತ್ತು ಅವರನ್ನು ಒಂದು ಬೆಳಕಿನ ಕಿರಣ ಸೇರಿಸುತ್ತದೆಂದು ಊಹಿಸಿಕೊಳ್ಳಿ. ಮಾತನಾಡಲು ಆರಂಭಿಸಿ. ಆಗ ಸಂಪರ್ಕ ಉಂಟಾಗುತ್ತದೆ. ಇದು ಯಾವ ದೇವರೊಂದಿಗಾದರೂ ಸರಿ.

**ಪ್ರ: ಧ್ಯಾನಾಭ್ಯಾಸದಲ್ಲಿ ತಂತ್ರಗಳ ಪಾತ್ರವೇನು?**

ಉ: ಆರಂಭದಲ್ಲಿ ತಂತ್ರಗಳು ತುಂಬಾ ಮಹತ್ವವಾದುದಾಗಿದೆ. ಅವು ನಮ್ಮ ಸಂಪೂರ್ಣ ಶರೀರವ್ಯವಸ್ಥೆಯನ್ನು ಶಾಂತಗೊಳಿಸುವಲ್ಲಿ ಸಹಾಯ ಮಾಡುತ್ತವೆ. ಅವು ಜೀವನದಲ್ಲಿ ಶಿಸ್ತು ಮತ್ತು ನಿಯಂತ್ರಣವನ್ನು ತರುತ್ತವೆ. ಒಮ್ಮೆ ನಮ್ಮ ಶರೀರವ್ಯವಸ್ಥೆಗೆ ನಿಶ್ಚಲತೆಯನ್ನು ಪ್ರವೇಶಿಸುವುದು ಹೇಗೆ ಎಂಬುದರ ಅರಿವಾದ ಮೇಲೆ, ತಂತ್ರಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತವೆ. ಇದು ತುಂಬ ಮುಖ್ಯ. ನಮ್ಮಲ್ಲಿ ಹೆಚ್ಚಿನವರು ಅಥವಾ ಎಲ್ಲರೂ ಧ್ಯಾನದ ಯಾವುದೋ ಒಂದು ಘಟ್ಟದಲ್ಲಿ ಇದನ್ನು ಅನುಭವಿಸಿ, ತಂತ್ರವನ್ನು ಮರೆತಿರುತ್ತೇವೆ. ಆಗ ನಮ್ಮ ಧ್ಯಾನವು ಯಶಸ್ವಿಯಾಗುತ್ತದೆ ಮತ್ತು ನಾವು ತಂತ್ರಗಳನ್ನು ಮೀರಿ ಮುಂದೆ ಹೋಗಿರುತ್ತೇವೆ.

**ಪ್ರ: ಗುರೂಜಿ, ನಾನು ನಿಮ್ಮೊಂದಿಗೆ ಸಂಪರ್ಕ ಸಾಧಿಸಿಕೊಂಡಿದ್ದೇನೆಂದು ಹೇಗೆ ತಿಳಿಯುವುದು?**

ಉ: ನಿಮ್ಮ ಚೈತನ್ಯದ ಮಟ್ಟವನ್ನು ಪರೀಕ್ಷಿಸಿಕೊಳ್ಳಿ. ನಿಮ್ಮ ಅಂತರ್-ಗ್ರಹಣ-ಶಕ್ತಿಯನ್ನು ಪರೀಕ್ಷಿಸಿ, ಹಾಗೆಯೇ ನೀವು ಆ ಕ್ಷಣದಲ್ಲಿ ಅನುಭವಿಸಿರುವ ಪ್ರೀತಿ ಮತ್ತು ಶಾಂತಿಯನ್ನು ಪರೀಕ್ಷಿಸಿಕೊಳ್ಳಿ. ನೀವು ಸಂಪರ್ಕಹೊಂದಿದ್ದೇ ಆದರೆ, ಅದು ನಿಮಗೆ ತಿಳಿಯುತ್ತದೆ.

**ಪ್ರ: ಕಲ್ಪನೆಗಳು ಎಷ್ಟರಮಟ್ಟಿಗೆ ಮುಖ್ಯ?**

ಉ: ಕಲ್ಪನೆಗಳು ಬಹಳ ಮುಖ್ಯ. ಏಕೆಂದರೆ ಅದು ಸೃಜನಶೀಲ ಶಕ್ತಿಯಾಗಿದೆ. ಬೆಳಕು ನಮ್ಮ ಮುಖಾಂತರ ಹರಿಯುತ್ತಿದೆ ಎಂದು ಕಲ್ಪಿಸಿಕೊಂಡರೆ, ಅದು ನಿಜವಾಗಿಯೂ ನಮ್ಮ ಮುಖಾಂತರ ಹರಿಯುತ್ತದೆ.

**ಪ್ರ: ಕಲ್ಪನೆಯಿಂದ ನಿಜಸ್ಥಿತಿಯನ್ನು ಸೃಷ್ಟಿಸಬಹುದೇ?**

ಉ: ಹೌದು.

**ಪ್ರ: ಆಧ್ಯಾತ್ಮಿಕ ಮಾರ್ಗವು ಏಕೆ ಜಾರಿಕೆಯ ಮಾರ್ಗವಾಗಿದೆ?**

ಉ: ಆಧ್ಯಾತ್ಮಿಕ ಮಾರ್ಗವು ಯಾವಾಗಲೂ ಸರಳವಾಗಿರುತ್ತದೆ, ಎಂದಿಗೂ ಜಾರಿಕೆಯದ್ದಾಗಿರುವುದಿಲ್ಲ. ಆದರೆ ನಮ್ಮ ಪ್ರಯತ್ನಗಳು ಸ್ಥಿರವಾಗಿರುವುದಿಲ್ಲ.

**ಪ್ರ: ಜನರು ನಿಜಸ್ಥಿತಿಗೆ ಏಕೆ ಕುರುಡಾಗಿರುತ್ತಾರೆ?**

ಉ: ಅವರು ನಿಜಸ್ಥಿತಿಯ ಬಗ್ಗೆ ಕುರುಡಾಗಿರಲು ಅವರಲ್ಲಿ ಪ್ರಾಮಾಣಿಕತೆಯ ಅಭಾವ ಕಾರಣ. ಅವರು ಅದನ್ನು ಒಪ್ಪಿಕೊಳ್ಳುವುದಿಲ್ಲ ಮತ್ತು ನಿಜಸ್ಥಿತಿಯನ್ನು ನೋಡುವುದಿಲ್ಲ. ಅವರು ಇದನ್ನು ಒಪ್ಪಿಕೊಳ್ಳಲು ಆರಂಭಿಸಿದಾಗಷ್ಟೇ ಅವರ ಸಾಧನೆ ಪ್ರಾರಂಭಗೊಳ್ಳುತ್ತದೆ.

**ಪ್ರ: ನಾವು ಹೆಚ್ಚಿನ ಪ್ರೀತಿಯನ್ನು ಸ್ವಾಭಾವಿಕವಾಗಿ ಹೇಗೆ ವ್ಯಕ್ತಗೊಳಿಸಬಹುದು?**

ಉ: ಅದಕ್ಕೆ ಒಂದೇ ಒಂದು ಮಾರ್ಗವಿದೆ. ನಾವು ಸಂಪೂರ್ಣವಾಗಿ ಪರಿವರ್ತನೆಗೊಳ್ಳಬೇಕು, ಬದಲಾಗಬೇಕು. ನಮ್ಮಲ್ಲಿ ಪರಿವರ್ತನೆಯಾದಾಗ, ಪ್ರೀತಿ ತಾನೇ ತಾನಾಗಿ, ಸ್ವಾಭಾವಿಕವಾಗಿ ಹರಿಯುತ್ತದೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| Preparing for 2012 | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| iGuruji - Vol 5 | 100/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| Guruji Speaks Vol - 4 | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे | |
| सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತ)

ಇಡೀ ವಿಶ್ವವೇ ನನ್ನನ್ನು ಅಪ್ಪಿಕೊಂಡಂತಹ ಒಂದು ವಿಶಿಷ್ಟವಾದ ಸೂಕ್ಷ್ಮಮಟ್ಟದ ಅನುಭವ ನನಗಾಯಿತು. ಈ ಅನುಭವವನ್ನು ನಾನು ಒಂದು ಚಿಕ್ಕ ಮಗುವಿನಂತೆ ಆನಂದಿಸಿದೆ. ನಾನು ಯಾರೇ ಆಗಿದ್ದರೂ, ಏನೇ ಮಾಡಿದರೂ ಯಾವಾಗಲೂ ವಿಶ್ವ ನನ್ನನ್ನು ಸ್ವೀಕರಿಸುತ್ತದೆಂಬುದು ನನಗೆ ತಿಳಿಯಿತು. ಇದು ನನ್ನ ಮನಸ್ಸಿಗೆ ನಾಟಿತು. ಈಗ ನಾನು ಪ್ರತಿಯೊಬ್ಬರಲ್ಲೂ ಇರುವ ದೈವತ್ವದೊಂದಿಗೆ ಸಂಪರ್ಕಿಸಲು ಪ್ರಯತ್ನಿಸುತ್ತೇನೆ. ಈ ರೀತಿ ಬದುಕುವುದು ತುಂಬಾ ಸುಂದರವಾಗಿದೆ. ನಾನು ಈಗ ಯಾವುದರಲ್ಲೂ ತಾರತಮ್ಯ ಮಾಡುವುದಿಲ್ಲ.

ಋಷಿಗಳೊಂದಿಗೆ ಸಂಪರ್ಕ ಕಲ್ಪಿಸಿಕೊಂಡಾಗ ಒಂದು ರೀತಿಯ ಪ್ರಬಲವಾದ ಸಂಸ್ಕರಣೆ ಸ್ವಲ್ಪ ಹೊತ್ತು ನಡೆಯುತ್ತದೆ. ಇದಾದ ನಂತರ ನಾನು ಅತ್ಯಂತ ಶಕ್ತಿಯುತವಾದ ಚೈತನ್ಯವಲಯದಿಂದ ಕೂಡಿದ ದಟ್ಟ ನೀಲಿಬಣ್ಣದ ಸಾಗರದಲ್ಲಿ ಬೆರೆತು ಹೋಗುತ್ತೇನೆ. ಆ ವಿಸ್ತಾರಗೊಂಡ ಸ್ಥಿತಿಯಲ್ಲಿ, ಸಂಪೂರ್ಣ ಅರಿವಿನಿಂದ, ನನ್ನ ಅಂತರ್ಯದಲ್ಲಿ ಕೇಂದ್ರೀಕೃತಗೊಂಡು, ನಾನು ಕಾಯುತ್ತೇನೆ. ಆ ಸ್ಥಿತಿಯಲ್ಲಿ ನಾನು ಗುರೂಜಿಯವರು, ಋಷಿಗಳು ಹಾಗೂ ಭಗವಂತನ ಶಕ್ತಿಯನ್ನು ಅನುಭವಿಸುತ್ತೇನೆ.

– ವಿದ್ಯಾ ವಿಶ್ವಾಮಿತ್ರ

ನನ್ನಲ್ಲಿ ಪ್ರಶಾಂತತೆ ಹಾಗೂ ಸಮಾಧಾನದ ಗಾಢವಾದ ಅನುಭವ ತುಂಬಿದೆ. ನಾನು ಪರಿಪೂರ್ಣಳಂತೆನಿಸಿ, ಏಕತೆಯ ಅನುಭವ ತನಗೆ ತಾನೇ ಆಗುತ್ತದೆ. ಎಲ್ಲ ಭೇದ–ಭಾವ, ಅಂತರ ಕಣ್ಮರೆಯಾಗಿವೆ. ನನಗೀಗ ಭಗವಂತನನ್ನು ಸಂಪರ್ಕಿಸುವ ಅಥವಾ ಪ್ರಾರ್ಥಿಸುವ ಅವಶ್ಯಕತೆಯೇ ಕಾಣಿಸುತ್ತಿಲ್ಲ, ಏಕೆಂದರೆ ಅದು ಸ್ವಾಭಾವಿಕವಾಗಿಯೇ ಆಗುತ್ತದೆ. ಈಗ ನನಗೆ ವಿವರಣಾತೀತ ತೃಪ್ತಿ ಸಿಕ್ಕಿದೆ! ಎಲ್ಲದರಲ್ಲಿಯೂ ಬಹಳಷ್ಟು ಸಂತೋಷ ಹಾಗೂ ಸೌಂದರ್ಯ ತುಂಬಿದೆ. ಅನೇಕಸಲ ನನ್ನ ದೈನಂದಿನ ಚಟುವಟಿಕೆಗಳಲ್ಲಿ ಕ್ಷಣಕಾಲದ ನಿಶ್ಚಲತೆಯ ಅನುಭವ ನನಗಾಗುತ್ತಿದೆ. ಅಂಥ ಸಮಯದಲ್ಲಿ ಉಂಟಾಗುವ ಹುಮ್ಮಸ್ಸನ್ನು ನೋಡಿ ಆಶ್ಚರ್ಯಪಡುತ್ತೇನೆ.

– ಉಷಾ ಸತೀಶ್ಚಂದ್ರ

ನಾನು ಮಹರ್ಷಿ ವಿಶ್ವಾಮಿತ್ರರೊಂದಿಗೆ ಸಂಪರ್ಕ ಹೊಂದಿ, ನನ್ನ ಪ್ರಶ್ನೆಗಳಿಗೆ ಉತ್ತರ ಪಡೆಯುವ ಪ್ರಯತ್ನದಲ್ಲಿ ಸಫಲನಾಗಲಿಲ್ಲ. ಆದ್ದರಿಂದ ನಾನು ಅವರನ್ನು ಪ್ರಾರ್ಥಿಸಿ, ಅವರ ಸಂದೇಶವನ್ನು ನಾನು ಅರ್ಥಮಾಡಿಕೊಳ್ಳಲು ಸಹಕರಿಸುವಂತೆ ಬೇಡಿಕೊಂಡು ನಿದ್ರಿಸಿದೆ. ನಂತರ ಬೆಳಗಿನ ಜಾವ ನನಗೊಂದು ಕನಸಾಗಿ, ಅದು ಮಾರನೆಯ ದಿನವೇ ನನಸಾಯಿತು. ಮಹರ್ಷಿ ವಿಶ್ವಾಮಿತ್ರರ ಉಪಸ್ಥಿತಿಯನ್ನು ಅನುಭವಿಸಿದ್ದಕ್ಕಾಗಿ ನನಗೆ ಸಂತೋಷವಾಗುತ್ತಿದೆ.

– ಅಭಯ್ ಜೋಶಿ

ಗುರುಪೂರ್ಣಿಮೆಯ ದಿನದಂದು ನಾನು ಗುರೂಜಿಯವರನ್ನು ಹಾಗೂ ಮಾನಸವನ್ನು ಬಹಳಷ್ಟು ನೆನಪಿಸಿಕೊಳ್ಳುತ್ತಿದ್ದೆ. ನಾನು ಕೋರಮಂಗಲದ ನಮ್ಮ ಧ್ಯಾನಕೇಂದ್ರಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿ ಮುಗುಳ್ನಗುತ್ತಿದ್ದ ಗುರೂಜಿಯವರ ಸಾನ್ನಿಧ್ಯದ ಅನುಭವವಾಯಿತು. ಅವರಿಗೆ ಆಳವಾದ ಧ್ಯಾನದ ಮೂಲಕ ನನ್ನ ಕೃತಜ್ಞತೆಯನ್ನು ತಿಳಿಸಿದೆ. ನಾನು ಬದಲಾದರೆ ಇಡೀ ಪ್ರಪಂಚವೇ ಬದಲಾಗುವುದೆಂಬ ಅರಿವಾಯಿತು. ಮಾರನೆಯ ದಿನ ಬೆಳಿಗ್ಗೆ ನನ್ನ ಧ್ಯಾನದಲ್ಲಿ ನಾನು ಸೂಕ್ಷ್ಮಶರೀರದಲ್ಲಿ ಗುರೂಜಿಯವರೊಡನಿದ್ದುದನ್ನು ನೋಡಿದೆ.

– ರವಿ ಜಿ. ಹೆಚ್.

ಒಂದು ವರ್ಷದಿಂದ ಪ್ರತಿನಿತ್ಯ ಶಾಲೆಯ ಪಾಠಗಳ ಅಭ್ಯಾಸಕ್ಕೆ ಕೂರುವ ಮೊದಲು, ನನ್ನ ತಾಯಿಯ ಆದೇಶದಂತೆ ತಲೆಯ ತುಂಬಾ ಬಿಳಿಯ ಬೆಳಕನ್ನು ಕೆಲವು ನಿಮಿಷಗಳವರೆಗೆ ತುಂಬಿಕೊಳ್ಳುತ್ತಿದ್ದೆ. ಇದರಿಂದ ನನ್ನ ಶಾಲಾಭ್ಯಾಸದಲ್ಲಿ ಮುನ್ನಡೆ ಪಡೆಯುವುದರೊಂದಿಗೆ, ಈ ವರ್ಷ ನನ್ನ ಕಾಲೇಜಿನಲ್ಲಿ ರ್‍ಯಾಂಕ್ ಕೂಡಾ ಪಡೆದಿದ್ದೇನೆ.

– ಕಾವ್ಯಶ್ರೀ ಆರ್.

ಇತ್ತೀಚೆಗೆ ನನ್ನ ಅಂತರಂಗದಲ್ಲಿ ನಿಶ್ಚಲತೆಯನ್ನು ಅನುಭವಿಸುವುದು ಸುಲಭವಾಗುತ್ತಿದೆ. ಒಂದು ಸಲ ಧ್ಯಾನಮಾಡುತ್ತಿದ್ದಾಗ ಪರಿಪೂರ್ಣ ನಿಶ್ಚಲತೆಯನ್ನು ಕೆಲವು ಕ್ಷಣ ನಾನು ಅನುಭವಿಸಿದೆ. ಅದರ ಮುಂದೆ ಪ್ರಪಂಚದ ಯಾವುದೇ ಆಗುಹೋಗುಗಳೂ ಮುಖ್ಯವಲ್ಲ. ನನ್ನ ಹೆಚ್ಚಿನ ಅನುಭವಗಳು ಕಣ್ಣಿಗೆ ಕಾಣುವುದಿಲ್ಲ, ಆದರೆ ಅನುಭವಕ್ಕೆ ಬರುತ್ತವೆ. ನಾನು ಶಂಬಲದ ಮಾಸ್ಟರ್‌ಗಳೊಂದಿಗೆ ನಿಕಟವಾಗಿ ಇರುವಂತಹ ಅನುಭವವಾಗುತ್ತದೆ.

– ಗೀತಾ ಬಾಲಕೃಷ್ಣ

ನಾನು ಮತ್ತು ನನ್ನ ಸ್ನೇಹಿತೆಯೊಬ್ಬರು ಇಟಲಿಯ ಒಂದು ನಿರ್ಜನವಾದ ರೈಲ್ವೆ ಪ್ಲಾಟ್‌ಫಾರಂನಲ್ಲಿ, ರಾತ್ರಿ 11 ಗಂಟೆಯಲ್ಲಿ ಸಿಕ್ಕಿಹಾಕಿಕೊಂಡಿದ್ದೆವು. ಮಳೆ ಸುರಿಯುತ್ತಿದ್ದ ಆ ರಾತ್ರಿಯಲ್ಲಿ ಮಿಣುಕು ಬೆಳಕಿನ ಲೈಟ್ ಕಂಬವಲ್ಲದೆ ಬೇರೇನೂ ಕಾಣಿಸುತ್ತಿರಲಿಲ್ಲ. ಮನದಲ್ಲೇ ಮೌನವಾಗಿ ಬೆಳಕನ್ನು ಸಹಾಯಕ್ಕಾಗಿ ಪ್ರಾರ್ಥಿಸಿದೊಡನೆ, ಎಲ್ಲಿಂದಲೋ ಓರ್ವ ಹೆಂಗಸು ಬಂದು ಹತ್ತಿರ ನಿಂತಳು! ಅಲ್ಲದೆ ರೈಲು ಹತ್ತಲು ಸಹ ಬಾಗಿಲು ತೆರೆದು ಸಹಾಯ ಮಾಡಿದಳು! ದೈವೀ ಬೆಳಕು ಯಾವಾಗಲೂ ನನ್ನೊಡನಿದ್ದು ನನಗೆ ಮಾರ್ಗದರ್ಶನ ಮಾಡುತ್ತದೆ.

– ಹಿಲ್ಲಾ ಮಝ್ದಾ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ